ಬೂಟುಗಾಲಿನ ಸದ್ದು ಹೊರಡಿಸುತ್ತಾ ನಡೆದ ಇನ್ಸ್‌ಪೆಕ್ಟರ್ ರಾಜಧಾನಿಯ ತಲೆಯನ್ನು ಕೊರೆಯುತ್ತಿದ್ದುದು ಲಹರಿ ನಾಪತ್ತೆಯಾದ ಸುದ್ದಿಯೇ! ‘ಮೇನಕಾ’ದಿಂದ ಮರಳಿದ ಮೇಲೆ ವಿಚಿತ್ರ ತಿರುವು ಪಡೆದ ತನಿಖೆಗೆ ಪಾಂಬುವಿನ ಅಗತ್ಯವಿಲ್ಲವೆನಿಸಿತು. ಅವನು ಸಾಕ್ಷಿ ಒದಗಿಸುವ ಭರವಸೆಯೊಂದಿಗೆ ಮಾಯವಾದ ಮೇಲೆ ಪಿಸಿಯನ್ನೇ ನಂಬಿಕೊಂಡ ಅಧಿಕಾರಿ. ಆದರೆ ಪಿಸಿಯ ತಲೆ ಕೂಡ ಬಡ್ಡು ಹಿಡಿದಿದೆ.

ರಾಜಧಾನಿ ತನ್ನ ಕೋಣೆ ಹೊಕ್ಕು ಸೀಟಿನಲ್ಲಿ ಆಸೀನನಾದ. ತಲೆಗೆ ಕೈ ಹಚ್ಚಿ ಕುಳಿತಾಗ ಹೊರಗೆ ಯಾರದೋ ಹರಿದಾಟದ ಕಾಲ ಸದ್ದು ಕೇಳಿತು. ತಲೆಯೆತ್ತಿದ. ಬಾಗಿಲ ಬಳಿಯಲ್ಲೇ ಪೇದೆಯೊಬ್ಬ ನಿಂತಿರುವುದು ಕಂಡಿತು.

‘ಬಾರಯ್ಯ ಒಳಗೆ. ಅಲ್ಲೇ ಯಾಕೆ ನಿಂತಿದ್ದೀಯಾ?’ ಆತ್ಮೀಯತೆಯಿಂದ ಕರೆದ.

ಹೊರಗೆ ನಿಂತಿದ್ದ ಪೇದೆ ಒಳಗೆ ಬಂದು ಸೆಲ್ಯೂಟ್ ಹೊಡೆದ.

‘ಏನಯ್ಯಾ, ಏನು ವಿಷ್ಯ?’

‘ಸಾರ್, ನಿಮಗೆ ಇದನ್ನು ಕೊಡೋದಿಕ್ಕೆ ಒಬ್ರು ಕೊಟ್ಟು ಹೋದ್ರು?’ ಕಿಸೆಯಿಂದ ಬಿಳಿಯ ಮಡಚಿದ ಹಾಳೆಯನ್ನು ತೆಗೆದು ಚಾಚಿದ.

‘ಯಾರು? ಏನದು? ಏನೂ ವಿಷ್ಯ ಹೇಳಿಲ್ವೆ? ಹೆಸ್ರು ಹೇಳಿಲ್ವೆ?’ ಚೀಟಿಯನ್ನು ತೆಗೆದುಕೊಳ್ಳುತ್ತಲೇ ಪಿಸಿಯನ್ನು ಪ್ರಶ್ನಿಸಿದ.

‘ಇಲ್ಲ, ಇದನ್ನು ಕೊಟ್ಬಿಡಿ ಅಂತು’ ಪಿಸಿ ಹೊರಗೆ ಹೊರಡಲನುವಾದ.

‘ನಿಲ್ಲಿ, ಆ ವ್ಯಕ್ತಿ ನೋಡುವುದಕ್ಕೆ ಹೇಗಿದ್ದ?’ ಚೀಟಿಯನ್ನು ಬಿಡಿಸುತ್ತಲೇ ಪ್ರಶ್ನಿಸಿದ.

‘ಸಾರ್, ಎತ್ತರದ ದೇಹ. ಹುಳುಕು ಹಲ್ಲುಗಳು. ಬಿಸಿಲಿನ ಹೊಡೆತಕ್ಕೆ ಮುಖವೆಲ್ಲಾ ಕಪ್ಪು ಬಣ್ಣಕ್ಕೆ ತಿರುಗಿದ ಹಾಗೆ. ಚುರುಕು ನಡಿಗೆ’

ಇನ್ಸ್‌ಪೆಕ್ಟರ್ ತಲೆಯೆತ್ತಿದ. ಬಂದಿರುವ ವ್ಯಕ್ತಿಯನ್ನು ಗುರುತಿಸಿದವನಂತೆ ಮುಗುಳ್ನಕ್ಕ.

‘ಸರಿ, ನೀನಿನ್ನು ಹೋಗು’ ಅವನ ಆಣತಿಯನ್ನು ಕಾಯುತ್ತಿದ್ದಂತೆ ಪೊಲೀಸ್ ಪೇದೆ ಹೊರಗೆ ನಡೆದ.

ರಾಜಧಾನಿ ಚೀಟಿಯನ್ನು ಓದಿದ. ಬರೆದಿದ್ದು ಒಂದೇ ವಾಕ್ಯ.

‘ಅಗತ್ಯವಾಗಿ ಇವತ್ತು ಸಂಜೆ ಬಂಡೆಗೆ ಬರುವುದು’

ಇನ್ಸ್‌ಪೆಕ್ಟರ್ ಚೀಟಿಯನ್ನು ಚಿಂದಿ ಮಾಡಿ ಕಸದ ಬುಟ್ಟಿಗೆ ಎಸೆದ. ಅದನ್ನು ಯಾರೂ ಗಮನಿಸಲಿಲ್ಲವೆಂದುಕೊಂಡ. ಸ್ವಲ್ಪ ಹೊತ್ತು ಲಹರಿಯ ಫೈಲನ್ನು ಓದಿಕೊಂಡು ಅದಕ್ಕೆ ಪೂರಕವಾದ ಕೆಲವೊಂದು ವಿಷಯಗಳನ್ನು ತನ್ನ ವೈಯಕ್ತಿಕ ದಿನಚರಿಯಲ್ಲಿಯೂ ಬರೆದ. ಮೇಜಿನ ಅಂಚಿಗಿದ್ದ ಟೆಲಿಫೋನನ್ನು ತೆಗೆದು ಸಾರಂಗನ ಮೊಬೈಲ್‌ಗೆ ಕರೆ ಮಾಡಿದ.

ಊಟದ ತಟ್ಟೆಯ ಮುಂದೆ ಕುಳಿತಿದ್ದ ಸಾರಂಗ ಸ್ಟೇಷನ್‌ನಿಂದ ಬಂದ ಫೋನ್ ಕರೆಯನ್ನು ನೋಡಿ ಎಗರಿ ಬಿದ್ದ. ಈಗಷ್ಟೇ ಮನೆಗೆ ಬಂದು ತಲುಪಿದ್ದವನಿಗೆ ಮತ್ತೆ ಫೋನ್‌ನ ಕರೆ. ಕರೆಯನ್ನು ಸ್ವೀಕರಿಸಿ ಕಿವಿಗೆ ಒತ್ತಿ ಹಿಡಿದ.

‘ಹಲೋ ಸೆವೆನ್ ನಾಟ್ ಒನ್ ಹಿಯರ್’

ಅತ್ತ ಕಡೆಯಿಂದ ಕುಕ್ಕಿದಂತೆ ಮಾತುಗಳು ಕೇಳಿದವು.

‘ಗೊತ್ತಯ್ಯ ನಿನ್ನ ನಂಬರು. ಅದಕ್ಕೆ ನಿನ್ನ ವೈಯಕ್ತಿಕ ನಂಬರಿಗೆ ಕರೆ ಮಾಡಿರೋದು. ನನ್ನನ್ನು ಬಿಟ್ಟು ನಿಂಗೆ ಸ್ಟೇಷನ್ನಿಂದ ಬೇರೆ ಯಾರು ಕರೆ ಮಾಡ್ತಾರೆ ಹೇಳು? ಅದಿರ್ಲಿ, ನೀನೀಗ ಏನು ಮಾಡ್ಕೊಂಡಿದ್ದೀಯಾ?’

‘ಸಾರ್, ಊಟ. ಊಟ ಮಾಡ್ತಿದ್ದೀನಿ. ಈಗ ತಾನೆ ಮನೆಗೆ ಬಂದೆ’

‘ಅದು ನಂಗೆ ಗೊತ್ತು. ನಿನ್ನ ಮನೆವರೆಗೂ ಡ್ರಾಪ್ ಮಾಡ್ದೋನು ನಾನೇ ತಾನೆ?’

ಪಿಸಿ ತುಟಿ ಕಚ್ಚಿಕೊಂಡು ತಲೆಕೊಡವಿದ.

‘ಹೌದು ಸಾರ್, ಅಷ್ಟು ಗೊತ್ತಿದ್ದೂ ಮತ್ತೆ ನನ್ನ ಎಲ್ಲಿದ್ದೀಂತ ಕೇಳ್ತೀರಲ್ಲಾ? ಅದಕ್ಕೆ ಊಟ ಮಾಡ್ತಿದ್ದೀನಿ ಅಂದೆ’

‘ಸರಿ, ಊಟ ಮುಗಿಸ್ಕೊಂಡು ಆರಾಮವಾಗಿ ಸ್ಟೇಷನ್ ಕಡೆಗೆ ಬಾ. ಇವತ್ತು ರಾತ್ರಿ ಅಗತ್ಯವಾಗಿ ಒಂದು ಕಡೆಗೆ ಹೋಗೋದಿದೆ’

ಪಿಸಿಗೆ ಫಾರ್ಮ್ ಹೌಸ್ ನೆನಪಾಯಿತು. ಮತ್ತೆ ಅಧಿಕಾರಿಯ ಜೊತೆಗೆ ಅಲ್ಲಿಗೆ ಹೋಗಬೇಕೆ? ಎನ್ನುವ ಅನುಮಾನ ಕಾಡಿತು.

‘ಸಾರ್, ಮತ್ತೆ ಫಾರ್ಮ್ ಹೌಸ್‌ಗಾ?’ ಬೆದರು ಸ್ವರದಲ್ಲಿ ಕೇಳಿದ.

ಇನ್ಸ್‌ಪೆಕ್ಟರ್ ಗೆ ರೇಗಿತು.



## ಇಲ್ಲಿಯವರೆಗೆ

ಮೇನಕಾ ಬರ್ತ್‌ಡೇ ಪಾರ್ಟಿಗೆ ಬಂದ ‘ಆ ವ್ಯಕ್ತಿ’ಯನ್ನು ನೋಡಿದ ಕೂಡಲೇ ಮೇನಕಾ ಡಲ್ ಆಗುತ್ತಾಳೆ. ಇದನ್ನು ಗಮನಿಸಿದ ಕಿರಣ ‘ಮೇನಕಾ ಮಂಕಾಗಿರುವ ಕಾರಣ ಏನು’ ಎಂದು ಕೇಳುತ್ತಾನೆ. ಇದರಿಂದ ಮೇನಕಾಗೆ ಸಿಟ್ಟು ಬರುತ್ತದೆ. ಆಕ್ರೋಶದಿಂದ ಮನಸ್ಸಿಗೆ ಬಂದ ಹಾಗೆ ಕಿರುಚಾಡಲಾರಂಭಿಸುತ್ತಾಳೆ. ‘ನಾನು ಪ್ರೀತಿಸುವವಳಿಗೆ ಮುಂದೆ ತೊಂದರೆಯಾಗಬಾರದು ಎಂಬ ಉದ್ದೇಶದಿಂದ ಕೇಳುತ್ತಿದ್ದೇನೆ’ ಎಂದು ಸ್ಪಷ್ಟಪಡಿಸುತ್ತಾನೆ ಕಿರಣ. ಕೊನೆಗೆ ಮೇನಕಾ ‘ಅದು ನನ್ನ ಚಿಕ್ಕಪ್ಪನ ದೂರದ ಸಂಬಂಧಿ ಕಾಕುಟ್ಟ’ ಎಂದು ಬಾಯಿ ಬಿಡುತ್ತಾಳೆ. ಇತ್ತ ಕಡೆ ಇನ್ಸ್‌ಪೆಕ್ಟರ್ ಆಲೆಮನೆಯತ್ತ ಪಯಣ ಬೆಳೆಸುತ್ತಾನೆ. ಅಲ್ಲಿಯ ಫಾರ್ಮ್‌ಹೌಸ್‌ನಲ್ಲಿ ಲಹರಿ ತಂಗಿದ್ದ ವಿಷಯ ತಿಳಿದು ಇನ್ಸ್‌ಪೆಕ್ಟರ್ ಅಲ್ಲಿಯ ಹೆಂಗಸರ ಬಳಿ ಲಹರಿಯ ಕಣ್ಮರೆಯ ಮಾಹಿತಿ ಕಲೆ ಹಾಕುತ್ತಾನೆ. ಫಾರ್ಮ್ ಹೌಸ್‌ನಲ್ಲಿ ಇದ್ದ ಹೆಂಗಸೊಬ್ಬಳು ಒಂದು ಚೀಲವನ್ನು ತೋರಿಸಿ ಇದು ಬೇಕಾ ಎಂದು ಕೇಳುತ್ತಾಳೆ. ಅದು ಯಾರ ಚೀಲ ಎಂದು ವಿಚಾರಿಸಿದಾಗ ಅದು ಲಹರಿ ಬಳಸುತ್ತಿದ್ದ ಚೀಲ ಎಂದು ಗೊತ್ತಾಗುತ್ತದೆ. ಇದನ್ನು ತಿಳಿದ ಮೇನಕಾ ಅಚ್ಚರಿಗೊಳ್ಳುತ್ತಾಳೆ.

‘ಅಲ್ಲೇನಿದೆ ಮಣ್ಣಾಂಗಟ್ಟಿ’

‘ಸಾರ್, ಮಧ್ಯಾಹ್ನ ನಾವು ಅಲ್ಲಿಗೆ ಹೋಗಿದ್ದು ಅದಕ್ಕೇನಾ?’

‘ನಿಲ್ಸಯ್ಯಾ ನಿನ್ನ ಪುರಾಣ. ಮಧ್ಯಾಹ್ನದ್ದು ಮಧ್ಯಾಹ್ನಕ್ಕೆ ಮುಗಿಯಿತು. ನಾನು ಹೇಳ್ತಾ ಇರೋದು ಸಂಜೆಯ ವಿಷಯ. ಬಹಳ ಗೌಪ್ಯವಾದದ್ದು. ಅದಕ್ಕಾಗಿ ನಿಂಗೆ ಈಗ್ಲೇ ಅದನ್ನು ಹೇಳೋದಿಲ್ಲ. ಸ್ಟೇಷನ್‌ಗೆ ಬಂದ ನಂತರ ನಿಂಗೆ ಗೊತ್ತಾಗುತ್ತೆ’

ಗೌಪ್ಯವಾದ ವಿಷಯವನ್ನು ಕೇಳಬೇಕೆನ್ನುವುದು ಗೌಪ್ಯವಾಗಿಯೇ ಉಳಿಯಿತು.

‘ಆಗಲಿ, ಈಗ ನೆಮ್ಮದಿಯಿಂದ ಊಟ ಮಾಡಿ, ಸ್ವಲ್ಪ ಹೊತ್ತು ಮಲಗ್ತೀನಿ. ಇನ್ನು ರಾತ್ರಿ ಎಷ್ಟು ಹೊತ್ತಾಗುತ್ತೋ ಹಿಂದಿರುಗುವಾಗ’

‘ಏನೂ ಹೊತ್ತಾಗೊಲ್ಲ. ಬೇಗನೇ ಹಿಂತಿರುಗ್ತೀವಿ. ಅದರ ಬಗ್ಗೆ ಯೋಚ್ನೆ ಮಾಡ್ಬೇಡ. ನೀನೀಗ ಸರೀ ಊಟ ಮಾಡ್ಬಿಟ್ಟು ಹೊರಟು ಬಾ’ ಅಧಿಕಾರಿ ಬೇಸರದ ದನಿಯಲ್ಲೆಂದಾಗ ಪಿಸಿ ಸಾರಂಗನಿಗೆ ತನ್ನ ತಪ್ಪಿನ ಅರಿವಾಯಿತು.

‘ಕ್ಷಮಿಸಿ ಸಾರ್, ಆದಷ್ಟು ಬೇಗನೆ ಬಂದು ಬಿಡ್ತೀನಿ’

ಫೋನ್ ಕರೆ ನಿಂತಿತು. ಸಾರಂಗ ನಿಟ್ಟುಸಿರಿಟ್ಟು ಊಟ ಮುಂದುವರಿಸಿದ.

ಸ್ಟೇಷನ್‌ನಲ್ಲಿ ಕುಳಿತಿದ್ದ ಇನ್ಸ್‌ಪೆಕ್ಟರ್ ರಾಜಧಾನಿ ಇನ್ನಷ್ಟು ಗಹನವಾಗಿ ಯೋಚಿಸಲಾರಂಭಿಸಿದ. ಮೇನಕಾಳ ಮೇಲೆ ಅವನಿಗೆ ಸಂದೇಹ ಕಡಿಮೆಯಾಗಲಿಲ್ಲ. ತನ್ನ ಮೇಲೆ ಅವಳಿಗೆ ದ್ವೇಷವಿತ್ತೆ? ಇದ್ದರೂ ಯಾವ ಕಾರಣಕ್ಕೆ?

ಆದರೆ ಮೇನಕಾ ಹೇಳುವಂತೆ ಅವಳಿಗೆ ತಂಗಿಯ ಮೇಲೆ ಎಲ್ಲಿಲ್ಲದ ಪ್ರೀತಿ. ಫಾರ್ಮ್ ಹೌಸಿಗೆ ಬರುವುದಿದ್ದರೂ ತಂಗಿಯ ಜೊತೆಗೆ ಬರುತ್ತಾಳೆ. ಮನೆಯಲ್ಲಿ ಅವರಿಬ್ಬರ ಸಂಬಂಧ ಹೇಗಿತ್ತು ಅನ್ನುವುದಕ್ಕೆ ಕಾಶಮ್ಮ ಸರಿಯಾಗಿ